

# ಕರಾವಳಿಗೂ ಬಂದಿದೆ ಘಕ್!

ಚಿತ್ರ– ಬರಹ: **ಹರೀಶ್ ಕೆ.ಆದೂರು**

ಘಕ್..! ನೋಡಲು ಸುಂದರ...ಅತ್ಯಾಕರ್ಷಕ. ಯಾರೇ ಆದ್ರೂ ಒಮ್ಮೆ ಕೈಯಲ್ಲಿ ಹಿಡಿದು ಇದರ ಅಂದವನ್ನು ಮನಸಾರೆ ಸವಿಯದೆ ಇರಲಾರರು. ಅಂತಹ ವಿಶೇಷವಾದ ಕಿತ್ತಳೆ ಬಣ್ಣದ ಮೋಹಕ ಬೆಡಗಿನ ಘಕ್ ಹಣ್ಣು ಮಾರಕ ಕ್ಯಾನ್ಸರ್‌ಗೆ ಮದ್ದಂತೆ!

ಮೂಲತಃ ಆಗ್ನೇಯ ಏಷ್ಯಾ ಪ್ರದೇಶದ ಈ ಹಣ್ಣು ನಮ್ಮ ಕನ್ನಡ ಕರಾವಳಿಯಲ್ಲಿಯೂ ಯಥೇಚ್ಛವಾಗಿ ಬೆಳೆಯುತ್ತದೆ. ದಕ್ಷಿಣ ಚೀನಾದಿಂದ ತೊಡಗಿ ಆಸ್ಟ್ರೇಲಿಯಾ, ಥಾಯ್ಲೆಂಡ್, ಮ್ಯಾನ್ಮಾರ್, ಕಾಂಬೋಡಿಯಾ, ವಿಯೆಟ್ನಾಂಗಳಲ್ಲಿ ಈ ಹಣ್ಣು ಹೇರಳವಾಗಿ ಬೆಳೆಯುತ್ತವೆ.

ಇದು ಬಳ್ಳಿ ಜಾತಿಗೆ ಸೇರಿದ್ದು. ಸ್ವಲ್ಪ ಸಿಹಿ ರುಚಿ. ಮುಳ್ಳುಸೌತೆಯ ರುಚಿ ಹಾಗೂ ವಾಸನೆಯನ್ನು ಹೋಲುವಂತಿದೆ. ವೃತ್ತಾಕಾರ ಅಥವಾ ಮೊಟ್ಟೆಯಾಕಾರದಲ್ಲಿ ಕಂಡುಬರುತ್ತದೆ. ಹೊರಮೇಲ್ಮೈ ಮುಳ್ಳುಗಳ ರಚನೆಯಿಂದ ಕೂಡಿದ್ದು ತೆಳು ಸಿಪ್ಪೆಯನ್ನು ಹೊಂದಿದೆ. ಕಪ್ಪು ಯಾ ಕಂದು ಬಣ್ಣದ ಬೀಜಗಳಿವೆ. ಎಳೆಯ ಕಾಯಿಗಳನ್ನು ಪಲ್ಯ, ಸಾಂಬಾರ್ ಮಾಡಲು ಬಳಸುತ್ತಾರೆ.

ಮೂಡಬಿದಿರೆಯ ಸೋನ್ಸ್ ಫಾರ್ಮ್‌ನಲ್ಲಿ ಈ ಹಣ್ಣು ಲಭ್ಯವಿದೆ. ಬೆಳ್ತಂಗಡಿ ತಾಲೂಕಿನ ಯುವ ಕೃಷಿಕ ಅನಿಲ್ ಬಳೆಂಜ ಕಳೆದ ಮೂರು ವರುಷಗಳಿಂದ ತಮ್ಮ ಫಾರ್ಮ್‌ನಲ್ಲಿ ಈ ಹಣ್ಣಿನ ಬಳ್ಳಿಯನ್ನು ನೆಟ್ಟು ಬೆಳೆಸಿದ್ದಾರೆ. ಇದೀಗ ಫಲ ನೀಡುತ್ತಿದೆ.

ಕ್ಯಾನ್ಸರ್‌ಗೆ ಮದ್ದು: ಘಕ್ ಹಣ್ಣು ಕ್ಯಾನ್ಸರ್ ರೋಗಿಗಳಿಗೆ ಹೇಳಿ ಮಾಡಿಸಿದ್ದಂತೆ. ಈ ಹಣ್ಣು ಸೇವನೆಯಿಂದ ಕ್ಯಾನ್ಸರ್ ರೋಗ ನಿಯಂತ್ರಣವಾಗುತ್ತದೆ ಎನ್ನಲಾಗಿದೆ. ಕ್ಯಾನ್ಸರ್ ಸೆಲ್ಸ್‌ಗಳನ್ನು ನಾಶ ಮಾಡುವುದಲ್ಲದೆ ರೋಗನಿರೋಧಕ ಶಕ್ತಿಯನ್ನು ದೇಹದಲ್ಲಿ ಹೆಚ್ಚಿಸಲು ಇದು ಸಹಕಾರಿಯಂತೆ. ಈ ಬಗ್ಗೆ ಹೆಚ್ಚಿನ ಸಂಶೋಧನೆ ನಡೆಯಬೇಕಿದೆ.

ಘಕ್ ಬಳ್ಳಿ ಸುಮಾರು 80 ವರುಷಗಳ ಕಾಲ ಬಾಳಿಕೆ ಬರುತ್ತದೆ. ಕರಾವಳಿಯ ಹವಾಮಾನದಲ್ಲಿ ಘಕ್ ಬಳ್ಳಿ ಹುಲುಸಾಗಿ ಬೆಳೆಯುತ್ತದೆ. ಯಾವುದೇ ರೀತಿಯ ರೋಗಬಾಧೆಯ ತೊಂದರೆ ಇದಕ್ಕಿಲ್ಲ. ಅತ್ಯಂತ ವೇಗವಾಗಿ ಬೆಳೆಯುವುದಲ್ಲದೆ ಶೀಘ್ರವೇ ಫಲ ನೀಡುತ್ತದೆ. ಮಾರುಕಟ್ಟೆಯಲ್ಲಿ ಒಂದು ಕೆ.ಜಿಗೆ 150ರಿಂದ 200 ರೂಪಾಯಿವರೆಗೆ ಬೆಲೆ ಇದೆ.